# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 48 / 2018

ಸಿಡಬ್ಲ್ಯೂ- 1
ಪಿಡಬ್ಲ್ಯೂ- 3

**ದಿನಾಂಕಃ 30.10.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಶಿವಲಿಂಗರೆಡ್ಡಿ |
| ತಂದೆಯ ಹೆಸರುಃ | - | ಬಸರೆಡ್ಡಿ |
| ವಯಸ್ಸುಃ | - | 57 ವರ್ಷ |
| ಉದ್ಯೋಗಃ | - | ಸರಕಾರಿ ವಾಹನದ ಚಾಲಕ. |
| ವಾಸಸ್ಥಳಃ | - | ಸರಕಾರಿ ವಸತಿ ಗೃಹ ಯಾದಗಿರಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಕಳೆದ 21 ವರ್ಷಗಳಿಂದ ನಾನು ಯಾದಗಿರಿಯ ಸರಕಾರಿ ವಸತಿ ಗೃಹದಲ್ಲಿ ವಾಸವಾಗಿರುತ್ತೇನೆ.

ದಿನಾಂಕಃ 23.07.2017 ರಂದು ಅಮಾವಾಸ್ಯೆ ಇದ್ದ ಕಾರಣ ವಾಹನವನ್ನು ಸ್ವಚ್ಛ ಮಾಡಲು ವಾಹನಗಳನ್ನು ಸ್ವಚ್ಛ ಮಾಡುವ ಅಂಗಡಿಗೆ ಬೆಳಗ್ಗೆ 11 ಗಂಟೆಗೆ ಹೋಗಿದ್ದೆ. ನಂತರ ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ನನ್ನ ಮನೆಯ ಬಾಗಿಲು ತೆರೆದಿತ್ತು ನಾನು ಮನೆಯ ಒಳಗಡೆ ಹೋಗಿ ನೋಡಿದ್ದಾಗ ಮನೆಯಲ್ಲಿ ಇದ್ದ ಸಾಮಾನುಗಳು ಚೆಲ್ಲಪಿಲ್ಲಿಯಾಗಿ ಬಿದಿದ್ದವು. 7 ವರೇ ತೊಲೆ ಬಂಗಾರ ನನ್ನ ಮನೆಯಿಂದ ಕಳ್ಳತನ ಆಗಿತ್ತು. ಆದ್ದರಿಂದ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೆ. ಪೊಲೀಸರು ಬಂದು ಪಂಚನಾಮೆಯನ್ನು ಮಾಡಿದ್ದರು. ನಾನು ದೂರನ್ನು ನೀಡಿದ ಮೂರು ದಿನ ನಂತರ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರಿಸಿದ್ದರು. ಅಲ್ಲಿ ಪೊಲೀಸರು ಕಳ್ಳತನ ಆದ ನನ್ನ ಬಂಗಾರವನ್ನು ತೊರಿಸಿದ್ದರು. ಸದರಿ ಬಂಗಾರಗಳನ್ನು ನೋಡಿ ಗುರುತಿಸಿ ಅವುಗಳು ನನ್ನವು ಇದ್ದವು. ನಂತರ ಅಲ್ಲಿ ಏನು ಆಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ಪೊಲೀಸ್ ಠಾಣೆಯಲ್ಲಿ ಪೊಲೀಸರು ಕಳ್ಳತನ ಮಾಡಿದ ಮಹಿಳೆಯನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೊಲೀಸ್ ಠಾಣೆಯಲ್ಲಿ ನನ್ನ ಮನೆಯನ್ನು ಕಳ್ಳತನ ಮಾಡಿದ ಮಹಿಳೆಯನ್ನು ತೋರಿಸಿದ್ದರು ಎಂದು ಹೇಳುತ್ತಾರೆ. ಕಳ್ಳತನ ಮಾಡಿದ ಮಹಿಳೆಯ ಹೆಸರು ಜಯಶ್ರೀ ಇರುತ್ತದೆ ಎಂದು ಪೊಲೀಸರು ನನ್ನಗೆ ಹೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಮಹಿಳೆಯನ್ನು ಪೊಲೀಸ್ ಠಾಣೆಯಲ್ಲಿ ನೋಡಿದ್ದೆ ಎಂದು ಹೇಳುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮಹಿಳೆಯನ್ನು ನೋಡಿ ಗುರುತಿಸಿರುತ್ತಾರೆ ಸದರಿ ಮಹಿಳೆಯನ್ನು ಪೊಲೀಸ ಠಾಣೆಯಲ್ಲಿ ತೋರಿಸಿದ್ದರು ಎಂದು ಹೇಳುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಸಿ.ಎನ್. ರವರಿಂದಃ

ದಿನಾಂಕಃ 23.07.2017 ರಂದು ಬೆಳಗ್ಗೆ 11 ಗಂಟೆಗೆ ನಾನು ದೂರು ನೀಡಿದ್ದೆ. ದೂರನ್ನು ನೀಡಲು ನಾನು, ದೇವಿಂದ್ರ ಮತ್ತು ನೀಲಯ್ಯಸ್ವಾಮಿ ಹೋಗಿದ್ದೇವು. ದೂರನ್ನು ನೀಡಿದ ಎಷ್ಟು ದಿನಗಳ ನಂತರ ಪೊಲೀಸರು ಬಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಎಷ್ಟು ದಿನಗಳ ನಂತರ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮನೆಯನ್ನು ಕಳ್ಳತನ ಯಾರು ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಿಪಿ 1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಕಳ್ಳತನ ಆದ ಮನೆಯಲ್ಲಿಯೇ ವಾಸವಾಗಿರುತ್ತೇನೆ ಎಂದರೆ ಸರಿ. ಸದರಿ ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ಮಕ್ಕಳು ಕೂಡಿ ವಾಸವಾಗಿರುತ್ತೇವೆ. ನನ್ನ ಮನೆಯಲ್ಲಿ 6 ಕೋಣೆಗಳು ಇರುತ್ತವೆ. ನಮ್ಮ ಮನೆಯಲ್ಲಿ ಚಲ್ಲಪಿಲ್ಲಿಯಾಗಿ ಬಿದ್ದ ಸಾಮಾನುಗಳನ್ನು ಪೊಲೀಸರು ಬಂದ ನಂತರ ಅವುಗಳನ್ನು ಬದಿಗೆ ಇಟ್ಟಿದ್ದೆ. ಚಾಸಾ-2 ರಿಂದ 7 ರವರು ನನ್ನ ಸ್ನೇಹಿತರಾಗುತ್ತಾರೆ ಎಂದರೆ ಸರಿ. ಇದೇ ಮೊದಲು ಬಾರಿಗೆ ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ಮಹಿಳೆಯನ್ನು ನೋಡುತ್ತಿದ್ದೇನೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.